# ಸಾಮ್ರಾಟ ಅಶೋಕನ ಕಾಲ ಮತ್ತು ಸಾಮಾಜಿಕ ಕ್ರಾಂತಿ

ವಿನುತ ಬಿ.

ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವನಗುಡಿ, ಬೆಂಗಳೂರು.

DOI: https://doi.org/10.5281/zenodo.15504751

## ABSTRACT:

ಇತಿಹಾಸಕಾರ ಹೆಚ್.ಜಿ. ವೆಲ್ಸ್ "ಇತಿಹಾಸದ ಆಗಸದಲ್ಲಿ ಸಾವಿರಾರು ಜನ ರಾಜ ಮಹಾರಾಜರು ಆಳಿ ಹೋಗಿದ್ದಾರೆ. ಆದರೆ, ಸಾಮ್ರಾಟ ಅಶೋಕ ಮಾತ್ರ ಅಂದಿನಿಂದ, ಇಂದಿನವರೆಗೂ ಪ್ರಕಾಶಮಾನವಾದ ನಕ್ಷತ್ರವಾಗಿ ಪ್ರಜ್ವಲಿಸುತ್ತಿದ್ದಾನೆ" ಎಂದು ಹೇಳಿದ್ದಾರೆ.

ಮೌರ್ಯ ಸಾಮ್ರಾಜ್ಯದ ಸ್ಥಾಪಕರಾದ ಚಂದ್ರಗುಪ್ತ ಮೌರ್ಯನ ಮೊಮ್ಮಗ ಹಾಗೂ ರಾಜ ಬಿಂದುಸಾರನ ಮಗನಾದ ಸಾಮ್ರಾಟ ಅಶೋಕ ಕ್ರಿಸ್ತ ಪೂರ್ವ 304 ರಿಂದ ಕ್ರಿ.ಪೂ. 232ರ ವರೆಗೆ ಬದುಕಿದ್ದ. ಕ್ರಿ.ಪೂ. 268 ರಿಂದ 232ರ ವರೆಗೆ ಏಷಿಯಾದ ಅತಿ ದೊಡ್ಡ ಭೂಭಾಗವನ್ನು ಆಳಿದ ದೊರೆ. ಸಾಮ್ರಾಟ ಅಶೋಕನ ಕಾಲ ಮತ್ತು ಆಳ್ವಿಕೆ ಭಾರತದ ಇತಿಹಾಸದ ಗತಿ ಮತ್ತು ಮಾರ್ಗವನ್ನೇ ಬದಲಿಸಿತು.

ಅಶೋಕ ಗೌತಮ ಬುದ್ಧನು ಕಾಲವಾಗಿ ಸುಮಾರು 300 ವರ್ಷಗಳ ನಂತರ ಬದುಕಿದ್ದ ರಾಜ. ಗೌತಮ ಬುದ್ಧರ ಪ್ರಜ್ಞೆ, ಶೀಲ, ಕರುಣೆಯ ಧಮ್ಮ ಕ್ರಾಂತಿಯನ್ನು ತನ್ನ ಆಡಳಿತದ ಮಂತ್ರ ಮತ್ತು ಶಾಸನವಾಗಿಸಿ ತನ್ನ ಪ್ರಜೆಗಳನ್ನು ಮತ್ತು ಸಮಾಜವನ್ನು ವೈಚಾರಿಕತೆ, ನೀತಿ ಮತ್ತು ಕರುಣೆಯ ಮಾರ್ಗದಲ್ಲಿ ನಡೆಸಿದ ಆದರ್ಶ ದೊರೆ. ಬುದ್ಧರ ಉಪದೇಶವನ್ನು ಅಫ್ಘಾನಿಸ್ತಾನ ಕನ್ಯಾಕುಮಾರಿಯವರೆಗೆ ಮತ್ತು ಗ್ರೀಸ್, ಈಜಿಪ್ಟ್, ಸಿರಿಯಾಗಳಿಗೂ ಹಬ್ಬಿಸಿದ ಧಮ್ಮ ಪೋಷಕ. ಪ್ರಸ್ತುತ ಲೇಖನ ಅಶೋಕನ ಕಾಲದ ಕ್ರಾಂತಿಕಾರಿ ಬದಲಾವಣೆಯನ್ನು ಆತನು ಅನುಸರಿಸಿದ ಸಾಮಾಜಿಕ, ಆರ್ಥಿಕ, ರಾಜಕೀಯ ನೀತಿಗಳನ್ನು ಅಧ್ಯಯನ ಮಾಡಲು ಬಯಸುತ್ತದೆ.

## KEYWORDS:

ಮೌರ್ಯ ಸಾಮ್ರಾಜ್ಯ, ಸಾಮ್ರಾಟ ಅಶೋಕ, ಗೌತಮ ಬುದ್ಧ, ಸಾಮಾಜಿಕ ಕ್ರಾಂತಿ.

"ಇತಿಹಾಸ ಮರೆತವರು ಇತಿಹಾಸ ಸೃಷ್ಟಿಸಲಾರರು"

**– ಡಾ. ಬಿ.ಆರ್. ಅಂಬೇಡ್ಕರ್**

ಸಾಮ್ರಾಟ ಅಶೋಕ, ಆತನ ಆಳ್ವಿಕೆ ಮತ್ತು ಸಮಾಜ ಬಹಳ ವಿಶಿಷ್ಟವಾದುದು. ಸ್ವತಃ ರಾಜಕುಮಾರನಾಗಿದ್ದ ಅಶೋಕ, ಶಿಕ್ಷಿತನೂ, ದಕ್ಷನೂ, ಪ್ರಜೆಗಳ, ಮಂತ್ರಿಗಳ, ಪ್ರೀತಿಪಾತ್ರನು ಆಗಿದ್ದನು. ಮಹಾತ್ವಾಕಾಂಕ್ಷಿ ರಾಜನೂ ಆಗಿದ್ದನು. ಕಳಿಂಗ ಯುದ್ಧದಿಂದ ಆದ ಅಪಾರವಾದ ಸಾವು, ನೋವುಗಳನ್ನು ಕಂಡು ದುಃಖಿತನಾಗಿ, ಹಿಂಸೆಯನ್ನು, ಯುದ್ಧವನ್ನು ಕೈಬಿಟ್ಟನು. ಬುದ್ಧನ ಚಿಂತನೆಗಳಿಗೆ ಶರಣಾದನು. ನಂತರ ತನ್ನ ಬೃಹತ್ ಸಾಮ್ರಾಜ್ಯವನ್ನು ಬುದ್ಧನ ಚಿಂತನೆಗಳನ್ನು ಮಾರ್ಗದರ್ಶಕವಾಗಿಸಿಕೊಂಡು ಆಳಿದನು.

ರಾಜ್ಯಶಾಸ್ತ್ರವು ಕ್ರಾಂತಿ ಎಂದರೆ– ಕ್ಷಿಪ್ರ ಬದಲಾವಣೆ, ಸಮಾಜದ ಮೂಲ ರಚನೆ, ಕಾರ್ಯ ವಿಧಾನಗಳ ಬದಲಾವಣೆ, ಮೌಲ್ಯಗಳ ಪಲ್ಲಟ, ತತ್ವ ಚಿಂತನೆಗಳ ಬದಲಾವಣೆ ಎಂದು ವಿವರಿಸುತ್ತದೆ. ಜಗತ್ತಿನ ಎಲ್ಲ ಸಮಾಜಗಳು ವಿವಿಧ ಕಾಲಘಟ್ಟಗಳಲ್ಲಿ ಈ ಕ್ಷಿಪ್ರ ಬದಲಾವಣೆಗಳನ್ನು ಕಂಡಿವೆ ಮತ್ತು ಬದಲಾಗಿವೆ. ಇತಿಹಾಸಕಾರರೂ ಆದ ಡಾ. ಬಿ.ಆರ್. ಅಂಬೇಡ್ಕರ್ ಅವರು ಬುದ್ಧನ ಕಾಲದ ಮಹತ್ತರ ಸಾಮಾಜಿಕ ಬದಲಾವಣೆಯನ್ನು 'ಕ್ರಾಂತಿ' ಎಂದು ಮತ್ತು ಸಾಮ್ರಾಟ ಅಶೋಕನ ಮೊಮ್ಮಗ ಬೃಹದ್ರಥ ಮೌರ್ಯನ ಕೊಲೆ ಮತ್ತು ಬೌದ್ಧ ಭಿಕ್ಕುಗಳ ಮಾರಣ ಹೋಮ ಹಾಗೂ ಬ್ರಾಹ್ಮಣ್ಯದ ವಿಜಯವನ್ನು 'ಪ್ರತಿಕ್ರಾಂತಿ' ಎಂದು ಕರೆದಿದ್ದಾರೆ. ಸಾಮ್ರಾಟ ಅಶೋಕ ಬುದ್ಧನಿಂದ ಬದಲಾಗಿದ್ದ ಮಧ್ಯ ಮತ್ತು ಉತ್ತರ ಭಾರತದ ಜೊತೆಗೆ ತನ್ನ ಅತ್ಯಂತ ವಿಶಾಲವಾದ ಸಾಮ್ಯಾಜ್ಯದಲ್ಲಿ ಬುದ್ಧರ ಕ್ರಾಂತಿ ವಿಸ್ತರಿಸಿದನು ಮತ್ತು ಶಾಂತಿ, ದಯೆ, ಅಹಿಂಸೆಯ ಮೂಲಕ ತೀವ್ರಗೊಳಿಸಿದನು.

"ಪ್ರಜೆಗಳು ನನ್ನ ಮಕ್ಕಳು, ಅವರೆಲ್ಲರಿಗೂ ಸುಖ ಶಾಂತಿ ದೊರೆಯಬೇಕು. ಇದು ನಾನು ಎಲ್ಲ ಜೀವಿಗಳಿಗೂ ಸಲ್ಲಿಸಬೇಕಾದ ಋಣ" ಎಂದ ರಾಜ ಅಶೋಕ. ಯುದ್ಧದಿಂದ ಉಂಟಾಗುವ ಹಿಂಸೆಯ ನಿರರ್ಥಕತೆಯನ್ನು ಅರಿತ ಅಶೋಕ ಧಮ್ಮವನ್ನು ಸ್ವೀಕರಿಸಿ ಅದನ್ನು ತನ್ನ ಬದುಕಿನಲ್ಲಿ ಅನ್ವಯ ಮಾಡಿಕೊಳ್ಳುತ್ತಾ ಭಿಕ್ಕುಗಳು ಸಂಘದ ಜೊತೆ ನಿರಂತರ ಚರ್ಚೆ ಸಂವಾದ ನಡೆಸುತ್ತಾನೆ. ಬೌದ್ಧ ಸ್ಥಳಗಳಿಗೆ 255 ದಿನಗಳ ಕಾಲ ಪ್ರವಾಸ ಮಾಡುತ್ತಾನೆ ಮತ್ತು ಪ್ರಜೆಗಳ ಸಂಕಷ್ಟವನ್ನು ಆಲಿಸುತ್ತಾನೆ.

ಅಶೋಕನು ಮೊಟ್ಟಮೊದಲಿಗೆ ತನ್ನ ಆಳ್ವಿಕೆಯಲ್ಲಿ ಅಹಿಂಸೆ, ದಯೆಯನ್ನು ಜಾರಿಗೊಳಿಸುತ್ತಾನೆ. ಯಜ್ಞ–ಯಾಗ, ಪ್ರಾಣಿ ಹಿಂಸೆ, ಬಲಿ, ಬೇಟೆ, ಮೋಜು, ಪ್ರಾಣಿ ಕಾಳಗ ಎಲ್ಲವನ್ನೂ ನಿಷೇಧಿಸುತ್ತಾನೆ. ತಾನು ಕ್ರಮೇಣ ಸಸ್ಯಹಾರಿಯಾಗುತ್ತಾನೆ. ಗರ್ಭಧರಿಸಿದ ಅಥವಾ ಮರಿ ಹಾಕಿದ ಪ್ರಾಣಿಗಳನ್ನು ಆಹಾರಕ್ಕಾಗಿ ಕೊಲ್ಲುವುದನ್ನು ನಿಲ್ಲಿಸುತ್ತಾನೆ. ಇದು ಯಜ್ಞ–ಯಾಗ, ಪ್ರಾಣಿಬಲಿ, ಕರ್ಮಕಾಂಡದ ಆಚರಣೆಗಳ

ಬ್ರಾಹ್ಮಣ ಧರ್ಮಕ್ಕೆ ದೊಡ್ಡ ಹಿನ್ನಡೆಯಾಗಿತ್ತು. ಪ್ರಾಣಿಬಲಿಯಿಂದ ದೇವತೆಗಳನ್ನು ಸಂಪ್ರೀತರಾಗಿಸುವ ಮೌಢ್ಯಕ್ಕೂ ಸಹ ವಿರೋಧಿಯಾದ ನಡೆಯಾಗಿತ್ತು.

**ಪ್ರಜಾಪಾಲಕ:**

ಅಶೋಕ ಯಾವಾಗಲೂ ತನ್ನ ಪ್ರಜೆಗಳ ಹಿತ ಮತ್ತು ಸಂತೋಷವನ್ನೇ ಬಯಸಿದ ರಾಜ. ಇವನು ಜನರಿಗಾಗಿ ಮತ್ತು ಪ್ರಾಣಿಗಳಿಗಾಗಿ ತನ್ನ ಸಾಮ್ರಾಜ್ಯದ ಉದ್ದಗಲಕ್ಕೂ ಆರೋಗ್ಯ ಕೇಂದ್ರಗಳನ್ನು ತೆರೆಯುತ್ತಾನೆ. ಎಲ್ಲಾ ಕಡೆ ಔಷಧೀಯ ಸಸ್ಯಗಳ ವನಗಳನ್ನು ಬೆಳೆಸುತ್ತಾನೆ. ಹೊರಗಿನ ಗ್ರೀಸ್, ಈಜಿಪ್ಟ್, ಸಿರಿಯಾ, ಇರಾನ್‌ಗಳಲ್ಲೂ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುತ್ತಾನೆ. ಪ್ರವಾಸಿಗರಿಗೆ ತಂಗುದಾಣಗಳು, ಜನರಿಗೆ ಮತ್ತು ಪ್ರಾಣಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ. ರಸ್ತೆ ಬದಿಗಳಲ್ಲಿ ನೆರಳಿಗಾಗಿ ಸಾಲುಮರ, ಹಣ್ಣಿನ ಮರದ ತೋಪುಗಳನ್ನು ನೆಡೆಸುತ್ತಾನೆ (ಡಿ.ಡಿ. ಕೋಸಾಂಬಿ). ವೃದ್ಧರು, ರೋಗಿಗಳು, ಅನಾಥರು, ಅಂಗವಿಕಲರ ಆರೋಗ್ಯ ಮತ್ತು ಕ್ಷೇಮಕ್ಕಾಗಿ ವಿಶೇಷ ಕಾಳಜಿ ವಹಿಸಿದ್ದನು. ತನ್ನ ಸಾಮ್ರಾಜ್ಯದ ಎಲ್ಲಾ ಭಾಗಗಳಲ್ಲಿ ಅಶೋಕನು ಬುದ್ಧನ ಚಿಂತನೆ, ತತ್ವ ಉಪದೇಶವನ್ನೇ ಶಾಸನವನ್ನಾಗಿ ಕಲ್ಲು, ಬಂಡೆ ಮತ್ತು ಸ್ಥಂಭಗಳ ಮೇಲೆ ಬರೆಸುತ್ತಾನೆ. ಕರ್ನಾಟಕದ ಹಲವು ಕಡೆ ಆತನ ಶಾಸನಗಳು ಸಿಕ್ಕಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಇವು ಪ್ರಮುಖವಾಗಿ, ತಂದೆ, ತಾಯಿ, ಗುರುಗಳು, ವಿದ್ಯಾರ್ಥಿಗಳು, ಅಧಿಕಾರಿಗಳು, ಸಾಮಾನ್ಯ ಜನತೆ ಪಾಲಿಸಬೇಕಾದ ಕರ್ತವ್ಯಗಳ ಬಗ್ಗೆ ಎಚ್ಚರಿಸುತ್ತದೆ. ದುರಾಸೆ, ಮೋಸ, ಸ್ವಾರ್ಥಗಳನ್ನು ಮಾಡದಂತೆ, ದಯೆ, ಅಹಿಂಸೆ ಪ್ರಾಮಾಣಿಕತೆಯನ್ನು ಪಾಲಿಸುವಂತೆ ತಿಳಿಸುತ್ತದೆ. ಅಗತ್ಯಕ್ಕಿಂತ ಹೆಚ್ಚಿನದನ್ನು ಶೇಖರಿಸಬಾರದು ಎಂಬ ಉನ್ನತ ತತ್ವದ ಜೊತೆಗೆ ದಾನಗಳನ್ನು ನೀಡುವಂತೆ ಹೇಳುತ್ತದೆ. ಎಲ್ಲಾ ಧರ್ಮಗಳನ್ನು ಗೌರವಿಸುವಂತೆ ಸೂಚಿಸುತ್ತದೆ.

ಅಶೋಕನು ಅನುಷ್ಠಾನಗೊಳಿಸಿದ್ದ ಮೇಲಿನ ಎಲ್ಲ ನೀತಿಗಳು ಇಂದಿನ ಆಧುನಿಕ ಯುಗದಲ್ಲಿ ಜಗತ್ತಿನ ಎಲ್ಲ ದೇಶಗಳೂ ಅನುಸರಿಸುತ್ತಿರುವ ನೀತಿಗಳಾಗಿವೆ. ಹಾಗಾಗಿ ಅಶೋಕನ ಆಡಳಿತ ಮತ್ತು ಕಲ್ಯಾಣ ಕಾರ್ಯಕ್ರಮಗಳು ಇಂದಿಗೂ ಮಾದರಿಯಾಗಿವೆ.

**ಸಮಾಜ:**

ಅಶೋಕನ ಪ್ರಜೆಗಳು– ಹಿಂಸಕರು, ದಾಳಿಕೋರರು, ಅಲೆಮಾರಿಗಳಾಗಿರಲಿಲ್ಲ. ಎಲ್ಲ ಮತ, ಪಂಥ, ಸಮುದಾಯ, ಜನಾಂಗ, ಧರ್ಮದ ಜನರು ಪರಸ್ಪರ ಸಾಮರಸ್ಯ ಮತ್ತು ಗೌರವದಿಂದ ಇದ್ದರು. ಮತ ಪಂಥಗಳ ವಿಷಯದಲ್ಲಿ ಯಾವುದೇ ಘರ್ಷಣೆ ಇರಲಿಲ್ಲ, ಪ್ರಜೆಗಳಲ್ಲಿ ಏಕತೆ ಇತ್ತು. ಕೇಂದ್ರೀಕೃತ ಆಡಳಿತದ ಜೊತೆಗೆ ಪ್ರಾಂತೀಯ ಆಡಳಿತಗಳು ಇದ್ದವು. ರಾಜ–ಮಂತ್ರಿಗಳು ಸೇನೆ–ಗೂಢಚರ್ಯೆ, ಕಂದಾಯ,

ಆಡಳಿತ, ನ್ಯಾಯ, ಸಾರ್ವಜನಿಕ ಕಲ್ಯಾಣ, ನಗರಾಡಳಿತ ಮುಂತಾದ ವಿಭಾಗಗಳಿದ್ದವು. ಅಶೋಕನು ಮಾರುಕಟ್ಟೆ, ಕೈಗಾರಿಕೆ, ಅರಣ್ಯ, ಕೃಷಿ. ಬೊಕ್ಕಸ, ಟಂಕಸಾಲೆ, ಲೋಹಗಾರ, ಗಣಿ, ವಾಣಿಜ್ಯ, ಬಂದೀಖಾನೆ, ಸಾರ್ವಜನಿಕ ರಸ್ತೆ, ಬಂದರು ಇವು ಆರ್ಥಿಕ ಚಟುವಟಿಕೆಯ ಭಾಗವಾಗಿದ್ದರಿಂದ ಇವುಗಳಿಗೆ ಅತ್ಯಂತ ಹೆಚ್ಚಿನ ಪ್ರಾಮುಖ್ಯ ನೀಡಿದನು. ಕೃಷಿ, ನೀರಾವರಿ, ಕೆರೆ, ಕಟ್ಟೆ. ರಸ್ತೆ, ವಿಶ್ರಾಂತಿ ಗೃಹ ಹೀಗೆ ಎಲ್ಲ ಬಗೆಯ ಆರ್ಥಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಿದ್ದನು. ಕೃಷಿ ಆ ಕಾಲದ ಪ್ರಮುಖ ಚಟುವಟಿಕೆಯಾಗಿತ್ತು.

ಅಶೋಕ ಅತ್ಯತ್ತಮ ತೆರಿಗೆ ಪದ್ದತಿಯನ್ನು ಪಾಲಿಸುತ್ತಿದ್ದನು. ಆತನ ಆಳ್ವಿಕೆಯಲ್ಲಿ ಸಾಗರೋತ್ತರ ವ್ಯಾಪಾರಗಳು ಇದ್ದವು. ಭೂಮಿಯ ಒಡೆತನ ರಾಜನದಾಗಿತ್ತು. ಸೇನೆಯಲ್ಲಿದ್ದವರಿಗೆ ತೆರಿಗೆ ವಿನಾಯಿತಿ ಇತ್ತು. ಸಾಮ್ರಾಜ್ಯವು ಆರ್ಥಿಕವಾಗಿ ಸುಭಿಕ್ಷವಾಗಿತ್ತು. ತಮ್ಮ ಆಯ್ಕೆಯ ವೃತ್ತಿ, ಉದ್ದಿಮೆ, ಸೇವೆ ಎಲ್ಲವೂ ಕೂಡ ಎಲ್ಲರಿಗೂ ಮುಕ್ತವಾಗಿತ್ತು. ವೈದಿಕರ ವರ್ಣಾಶ್ರಮವು ಬಹುಸಂಖ್ಯಾತ ಶೂದ್ರರಿಗೆ, ಶಿಕ್ಷಣ ಅಧಿಕಾರ ಮತ್ತು ಆರ್ಥಿಕ ಚಟುವಟಿಕೆಗಳಿಂದ ದೂರವಿಟ್ಟಿತ್ತು, ನಿಷೇಧಿಸಿತ್ತು. ಅಶೋಕನ ಆಳ್ವಿಕೆಯಲ್ಲಿ ಪ್ರತಿಯೊಂದು ವೃತ್ತಿಗಳು ಸಂಘಟನೆಗಳನ್ನು ಸ್ಥಾಪಿಸಿಕೊಂಡಿದ್ದವು. ಕಸುಬುದಾರರು ಯಾವುದೇ ವೃತ್ತಿ ಕೌಶಲ್ಯ ಕಲಿಯುವ, ಕೈಗೊಳ್ಳುವ ಸ್ವಾತಂತ್ರ್ಯ ಇತ್ತು. ಸೇನೆಯ ಆಯ್ಕೆ ತರಬೇತಿ, ವೇತನಕ್ಕೆ ಬೇರೆ ವಿಭಾಗ ಇತ್ತು. ಸೇನೆಯನ್ನು ಗೆರಿಲ್ಲಾ ತಂತ್ರ, ಕಾಲಾಳು, ಅಶ್ವ, ಆನೆ, ರಥ ಮುಂತಾದ ರೀತಿಯಲ್ಲಿ ವಿಭಾಗಿಸಲಾಗಿತ್ತು. ಸಾಮ್ರಾಜ್ಯದ ಶಾಂತಿ ಹಾಗೂ ಸುವ್ಯವಸ್ಥೆಗೆ ಸೇನೆ, ಶಸ್ತ್ರಾಸ್ತ್ರಗಳೂ ಇದ್ದವು. ಜನಗಣತಿ ಮತ್ತು ಜನನ, ಮರಣ ನೋಂದಾಯಿಸುವ ಪದ್ದತಿ ಇತ್ತು.

ಅಶೋಕನ ಕಾಲದಲ್ಲಿ ಗುಲಾಮಗಿರಿ ಇರಲಿಲ್ಲ (ಮೆಗಾಸ್ತನೀಸ್). ಆ ಕಾಲದಲ್ಲಿ ಗುಲಾಮಗಿರಿ ಪದ್ಧತಿ ಬೇರೆ ದೇಶಗಳಲ್ಲಿ ಅಸ್ತಿತ್ವದಲ್ಲಿತ್ತು. ಸಾಗರೋತ್ತರ ವ್ಯಾಪಾರದಲ್ಲಿ ಅತ್ಯುತ್ತಮ ತೆರಿಗೆ ಪದ್ದತಿ, ಹಡಗು ನಿರ್ಮಾಣಗಳಲ್ಲಿ ಎಲ್ಲರಿಗೂ ಮುಕ್ತ ಅವಕಾಶಗಳಿದ್ದವು. ಜನಜೀವನದಲ್ಲಿ ಕಬ್ಬಿಣ, ಚಿನ್ನ, ತಾಮ್ರ, ಬೆಳ್ಳಿ, ಬಳಕೆಯಲ್ಲಿ ಇತ್ತು. ಕಬ್ಬಿಣ ಮತ್ತು ಚಿನ್ನ ಕರ್ನಾಟಕದಿಂದ ಸರಬರಾಜಾಗುತ್ತಿತ್ತು. ಹತ್ತಿ ಬಟ್ಟೆಗೆ ಮಧುರೈ, ಮಹಿಷ, ಕಳಿಂಗ, ಕಾಶಿ, ವಂಗಗಳು ಪ್ರಸಿದ್ಧವಾಗಿದ್ದವು. ಚಿನ್ನ, ಬೆಳ್ಳಿ ಆಭರಣಗಳನ್ನು ಪ್ರಜೆಗಳು ವಿಶೇಷ ದಿನಗಳಲ್ಲಿ ಧರಿಸುತ್ತಿದ್ದರು. ಗಂಗಾ, ಯಮುನ ಮತ್ತು ಇನ್ನಿತರ ದೊಡ್ಡ ನದಿಗಳನ್ನು ಒಳನಾಡು ಸಾರಿಗೆ ವ್ಯಾಪಾರಗಳಿಗೆ ಬಳಸಿಕೊಳ್ಳಲಾಗುತ್ತಿತ್ತು. ಭೂಮಿಯ ಒಡೆತನ ರಾಜನ ಅಧೀನದಲ್ಲಿತ್ತು. ಸಾಮ್ರಾಜ್ಯವನ್ನು ಐದು ವಿಭಾಗಗಳಾಗಿ ವಿಂಗಡಿಸಲಾಗಿತ್ತು. 'ಧಮ್ಮ ಮಾತ್ರರು' ಎಂಬ ಉನ್ನತ ಅಧಿಕಾರಿಗಳನ್ನು ನೇಮಿಸಲಾಗಿತ್ತು. ಸುಸ್ಥಿರ ಆರ್ಥಿಕ, ಸಾಮಾಜಿಕ, ರಾಜಕೀಯ

ನೀತಿಯಿಂದ ಎಲ್ಲರೂ ಸಮಾನರು ಎನ್ನುವ ತತ್ವ ಜಾರಿಯಲ್ಲಿತ್ತು. ಭತ್ತ, ಗೋಧಿ, ಬಾರ್ಲಿ ಇವು ಪ್ರಮುಖ ಬೆಳೆಗಳಾಗಿದ್ದವು. ಅಶೋಕನ ಕಾಲದಲ್ಲಿ ನಾಣ್ಯಗಳ ಬಳಕೆ ಚಾಲ್ತಿಯಲ್ಲಿತ್ತು. ವ್ಯಾಪಾರ ಮತ್ತು ನಗರಗಳ ಸಂಪರ್ಕಕ್ಕಾಗಿ ಉದ್ದದ ಹೆದ್ದಾರಿಗಳನ್ನು ನಿರ್ಮಿಸಲಾಗಿತ್ತು. ಮಧ್ಯ ಏಷ್ಯಾದಿಂದ ಮೈಸೂರಿನವರೆಗೂ ಅತ್ಯುತ್ತಮ ರಸ್ತೆಗಳಿತ್ತು. ತೂಕ ಅಳತೆಗೆ ಪ್ರತ್ಯೇಕ ವಿಭಾಗ ಇತ್ತು. ಚರ್ಮ, ಕಂಬಳಿ, ಕುದುರೆ, ಶಂಖ, ವಜ್ರ, ಹವಳ, ಮೆಣಸು, ದಾಲ್ಚಿನ್ನಿ ಮತ್ತು ದಂತ, ಹರಳು, ಹತ್ತಿ ಬಟ್ಟೆ, ನವಿಲು, ಗಿಳಿಗಳನ್ನು ರಫ್ತು ಮಾಡಲಾಗುತ್ತಿತ್ತು. ನಗರಗಳನ್ನು ಯೋಜನಾಬದ್ಧವಾಗಿ ನಿರ್ಮಿಸಲಾಗಿತ್ತು. ರಸ್ತೆ ಚರಂಡಿ ವ್ಯವಸ್ಥೆ ಉತ್ತಮವಾಗಿತ್ತು. ಗ್ರಾಮೀಣ ಆರ್ಥಿಕ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಇತ್ತು. ಹೀಗೆ ಅಶೋಕ ತನ್ನ ಸಾಮ್ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಅತ್ಯುತ್ತಮವಾಗಿಸಿದ್ದನು.

**ಮಹಿಳೆ:**

ಅಶೋಕನ ಕಾಲದಲ್ಲಿ ಮಹಿಳೆಯರು ಮನೆ ಒಳಗೆ ಮತ್ತು ಹೊರಗಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಕೃಷಿ, ಕುಶಲ ಕರ್ಮಿಗಳು, ಕಲಾವಿದರು, ಗೂಢಾಚಾರರು, ಅಂಗರಕ್ಷಕರು, ಸಾರಥಿಗಳು, ಗುರುಗಳು, ಭಿಕ್ಕುನಿಯರಾಗಿದ್ದರು. ಅತಿ ಹೆಚ್ಚಿನ ಮಹಿಳೆಯರು ನೇಯ್ಗೆಯಲ್ಲಿ ತೊಡಗಿಸಿಕೊಂಡಿದ್ದರು. ಪರಸ್ಪರ ಒಪ್ಪಿಗೆಯ ಮೇರೆಗೆ ವಿಚ್ಛೇದನದ ಅವಕಾಶ ಇತ್ತು ಮತ್ತು ಮರು ಮದುವೆಯ ಅವಕಾಶವಿತ್ತು. ವರ್ಣಾಶ್ರಮ ಹೆಣ್ಣು ಮಕ್ಕಳನ್ನು ಸ್ವಾತಂತ್ರ್ಯಕ್ಕೆ ಅರ್ಹರಲ್ಲ ಎಂದು, ಗಂಡಿನ ಅಧೀನದಲ್ಲೇ ಇರಬೇಕು ಎಂದು ವಿದ್ಯೆ, ಅಧಿಕಾರ, ಆಸ್ತಿಯಿಂದ ವಂಚಿಸಿ ಅಬಲೆಯನ್ನಾಗಿಸಿತ್ತು. ಆದರೆ, ಅಶೋಕನ ಕಾಲದಲ್ಲಿ ಮಹಿಳೆಯರು ನಂಬಿಕೆಗೆ, ನಿಷ್ಠೆಗೆ, ಸ್ವಾತಂತ್ರ್ಯಕ್ಕೆ ಅರ್ಹರು ಎಂಬ ಅಭಿಪ್ರಾಯವಿತ್ತು. ಸ್ವತಃ ಅಶೋಕನ ಮಗಳಾದ ಸಂಘಮಿತ್ರೆ ಶ್ರೀಲಂಕಾಗೆ ಧಮ್ಮ ಪ್ರಸಾರಕ್ಕೆ ಮುಡಿಪಾಗಿದ್ದಳು. ಬಾಬಾಸಾಹೇಬರು ಮಹಿಳೆ ಹಾಗೂ ಬಹುಸಂಖ್ಯಾತ ಶೂದ್ರರಿಗೆ ವಿದ್ಯೆ, ಆಸ್ತಿ, ಅಧಿಕಾರ ನಿಷೇಧಿಸಿದ್ದ ಮನುಸ್ಮೃತಿಯನ್ನು ಬಹಿರಂಗವಾಗಿ ಸುಟ್ಟದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

**ಶಿಕ್ಷಣ:**

ಸಾಮ್ರಾಟ ಅಶೋಕ ಮೊಟ್ಟಮೊದಲ ಬಾರಿಗೆ ಶಿಕ್ಷಣವನ್ನು ಎಲ್ಲರಿಗೂ ಮುಕ್ತವಾಗಿಸಿದನು. ಕಲಿಯುವವರಿಗೆ ಶಿಕ್ಷಣ ಮತ್ತು ವಸತಿ ಉಚಿತವಾಗಿತ್ತು. ಇಪ್ಪತ್ತ ಮೂರಕ್ಕೂ ಹೆಚ್ಚು ವಿಶ್ವವಿಖ್ಯಾತ ವಿಶ್ವವಿದ್ಯಾನಿಲಯಗಳನ್ನು ಅವನು ಪ್ರಾರಂಭಿಸಿದ್ದನು. ದೇಶ ವಿದೇಶಗಳಿಂದ ವಿದ್ಯಾರ್ಥಿಗಳು, ವಿದ್ವಾಂಸರು ಇಲ್ಲಿ ಚರ್ಚಿಸುತ್ತಿದ್ದರು. ವಿಶ್ವವಿದ್ಯಾನಿಲಯಗಳಲ್ಲಿ ಅಮೂಲ್ಯವಾದ ಗ್ರಂಥ ಭಂಡಾರ ಇತ್ತು. ಬೌದ್ಧ ಕೇಂದ್ರಗಳು, ವಿಹಾರಗಳು ಕೂಡ ವಿದ್ಯಾ ಕೇಂದ್ರಗಳಾಗಿದ್ದು ಅವುಗಳಲ್ಲಿ ಅನೇಕ ವಿಷಯಗಳನ್ನು

ಕಲಿಸುತ್ತಿದ್ದರು. ಇದು ಕೂಡ ಚಾರಿತ್ರಿಕವಾದ ಕ್ರಾಂತಿಯಾಗಿದೆ. ಅತ್ಯುನ್ನತ ಜ್ಞಾನಕೇಂದ್ರವಾದ ನಳಂದ ವಿಶ್ವವಿದ್ಯಾನಿಲಯದಲ್ಲಿ ಆ ಕಾಲದಲ್ಲಿ ಹತ್ತು ಸಾವಿರ ವಿದ್ಯಾರ್ಥಿಗಳು ಹಾಗೂ ಸಾವಿರ ವಿದ್ವಾಂಸರು ಇದ್ದರು.

**ಧರ್ಮ ಕ್ರಾಂತಿ:**

ಅಶೋಕನು ಬೌದ್ಧಾನುಯಾಯಿ. ಬೌದ್ಧ ಧಮ್ಮ ಸ್ವೀಕರಿಸಿ, ಅದನ್ನು ರಾಜಧಮ್ಮವಾಗಿ ಘೋಷಿಸಿದನು. ಭಿಕ್ಕು ಮತ್ತು ಸಂಘದ ನಿರಂತರ ಸಂಪರ್ಕದಲ್ಲಿದ್ದನು. 84,000 ಸ್ಥೂಪಗಳನ್ನು, ಸಾವಿರಾರು ವಿಹಾರ, ಚೈತ್ಯ, ಸಂಘಾರಾಮಗಳನ್ನು ಸಾಮ್ರಾಜ್ಯದ ಎಲ್ಲಾ ಭಾಗಗಳಲ್ಲಿ ನಿರ್ಮಿಸಿದ್ದನು. ಧಮ್ಮ ಪ್ರಚಾರಕ್ಕಾಗಿ ಅತಿ ಹೆಚ್ಚು ದಾನ, ಸಹಾಯಗಳನ್ನು ಮಾಡಿದನು. 'ಮೂರನೆಯ ವಿಶ್ವ ಬೌದ್ಧ ಮಹಾಮೇಳ'ವನ್ನು ಆಯೋಜಿಸಿದ್ದನು. ಸಾವಿರ ಮಂದಿ ಭಿಕ್ಕುಗಳು, ವಿದ್ವಾಂಸರು ಹತ್ತು ತಿಂಗಳ ಕಾಲ ಸಭೆ ಸೇರಿ ಚರ್ಚಿಸಿ ಸಂಘದ ಭಿಕ್ಕುಗಳ ನಿಯಮವನ್ನು ರೂಪಿಸಿದರು. ಸಂಘದ ನಿಯಮಗಳನ್ನು ಪಾಲಿಸದ, ಗೌರವಿಸದ ಭಿಕ್ಕುಗಳನ್ನು ಹೊರಹಾಕಲಾಗುತ್ತಿತ್ತು. ಬುದ್ಧನ ಚಿಂತನೆ ಉಪದೇಶ ಬೋಧನೆಗಳನ್ನು ಬರಹ ರೂಪದಲ್ಲಿ ದಾಖಲಿಸಲಾಯಿತು. ವ್ಯಾಪಾರ ಸಂಬಂಧ ಹೊಂದಿದ್ದ ದೂರದ ಗ್ರೀಸ್, ಈಜಿಪ್ಟ್, ಸಿರಿಯಾ, ಇರಾನ್ ಮುಂತಾದ ದೇಶಗಳಿಗೆ ಬೌದ್ಧ ಧಮ್ಮ ಪ್ರಚಾರಕರನ್ನು ಕಳಿಸಿದ್ದನು. ಮತ್ತು ಅಲ್ಲಿಯೂ ಕೂಡ ಅಶೋಕ ಹಲವು ಶಾಸನಗಳನ್ನು ಕೆತ್ತಿಸಿದ್ದಾನೆ. ಅತ್ಯಂತ ಪ್ರಾಚೀನ ಲಿಪಿಯಾದ ಪಾಳಿ ಮತ್ತು ಪ್ರಾಕೃತದ ಲಿಪಿಯ ಬೆಳವಣಿಗೆ ಕೂಡ ಅಶೋಕನ ಕಾಲದಲ್ಲೇ ಆಗಿದೆ. ಪಾಳಿ ಭಾಷೆಯ ವರ್ಣಮಾಲೆ ಮತ್ತು ವ್ಯಾಕರಣ ಅತ್ಯಂತ ವೈಜ್ಞಾನಿಕವಾಗಿ ವರ್ಗೀಕರಿಸಲಾಗಿದೆ.

ಭಾಷಾ ತಜ್ಞರಾದ ಟೇಲರ್ 'ಪಾಳಿ ಲಿಪಿಯನ್ನು ಸರಳ, ಭವ್ಯ, ದೋಶರಹಿತ' ಎಂದು ಹೊಗಳಿದ್ದಾರೆ. ಹೀಗೆ ಅಶೋಕನ ಯುಗವನ್ನು ಕ್ರಾಂತಿ ಯುಗ, ಸುವರ್ಣ ಯುಗ ಎಂದು ಕರೆಯಲಾಗಿದೆ. ಅಶೋಕನ ಕಾಲದಲ್ಲಿ 'ನಗರಗಳ ಅಭಿವೃದ್ಧಿ ಕೂಡ ಒಂದು ಕ್ರಾಂತಿ' ಎಂದು ಇತಿಹಾಸಕಾರ ವಿ. ಗಾರ್ಡನ್ ಚೈಲ್ಡ್ ಅಭಿಪ್ರಾಯ ಪಡುತ್ತಾರೆ. ಅಶೋಕನ ಬೃಹತ್ ವೈಭವಯುತ ಕಲಾಕೃತಿಯಂತ ಅರಮನೆಯನ್ನು ನೋಡಿ ಮಾನವರಿಂದ ಇದನ್ನು ನಿರ್ಮಿಸಲು ಸಾಧ್ಯವಿಲ್ಲ ಎಂದು ಪ್ರವಾಸಿ ಫಾಹಿಯಾನ್ ಉಲ್ಲೇಖಿಸುತ್ತಾನೆ. ಯೋಜನಾ ಬದ್ಧ ನಗರಗಳನ್ನು ನೋಡಿ ಕನ್ನಿಂಗ್ ಹ್ಯಾಮ್ ಅಚ್ಚರಿ ವ್ಯಕ್ತಪಡಿಸುತ್ತಾರೆ. ಬ್ರಿಟಿಷ್ ಅಧಿಕಾರಿ ಸಾಂಚಿಯ ಸ್ಥೂಪದ ಸೌಂದರ್ಯವು ಆಧುನಿಕ ಲಂಡನ್ ನಗರವನ್ನು ಮೀರಿಸುತ್ತದೆ ಎಂದಿದ್ದಾರೆ.

ಅಶೋಕನ ಆಡಳಿತದಲ್ಲಿ ಶಿಕ್ಷಣ, ವ್ಯಾಪಾರ, ವೃತ್ತಿಗಳಲ್ಲಿ ಎಲ್ಲರಿಗೂ ಮುಕ್ತ ಅವಕಾಶವನ್ನು ಒದಗಿಸಿಕೊಡಲಾಗಿತ್ತು. ಇದು ಶ್ರೇಣಿಕೃತ ಸಮಾಜವು ಸಮ

ಸಮಾಜವಾಗಿ ಬದಲಾದ ಮಹತ್ತರ ಕ್ರಾಂತಿಯಾಗಿತ್ತು. ಹೀಗೆ ಅಶೋಕ ತನ್ನ ಬದುಕು, ಅಧಿಕಾರ, ಹಣವನ್ನು ಸಮ ಸಮಾಜ ನಿರ್ಮಿಸಲು ವ್ಯಯಿಸಿದ್ದಾನೆ. ಆ ಮೂಲಕ ಸಾಮ್ರಾಟ ಅಶೋಕ ಇಂದಿನ ಭಾರತಕ್ಕೂ ಆಳುವವರಿಗೂ, ಪ್ರಜೆಗಳಿಗೂ, ಅಧಿಕಾರಿಗಳಿಗೂ ಅಮೂಲ್ಯ ಸಂದೇಶ ಮತ್ತು ಮಾದರಿಯನ್ನು ಬಿಟ್ಟು ಹೋಗಿದ್ದಾನೆ. ಭಾರತವನ್ನು ಸಮ ಸಮಾಜವಾಗಿಸಲು ಅಶೋಕನನ್ನು ಅವನ ಆಡಳಿತ ನೀತಿಯನ್ನು ಮತ್ತೆ ಮತ್ತೆ ಅಧ್ಯಯನ ಮಾಡಬೇಕಿದೆ.

**ಪರಾಮರ್ಶನ ಗ್ರಂಥಗಳು:**


1. ಅಂಬೇಡ್ಕರ್ ಬಿ.ಆರ್. (ಮೂಲ), ಜಗದೀಶ್ ಕೊಪ್ಪ ಎನ್. (ಅನು), (2018), ಬುದ್ಧ ಮತ್ತು ಆತನ ಧಮ್ಮ, ಪಾಲಿ ಇನ್ ಸ್ಟಿಟ್ಯೂಟ್, ಕಲಬುರಗಿ.
2. ಅಂಬೇಡ್ಕರ್ ಬಿ.ಆರ್., (2010), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂಪುಟ: 10, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
3. ಅಂಬೇಡ್ಕರ್ ಬಿ.ಆರ್., ಚಂದ್ರಕಾಂತ ಪೋಕಳೆ (ಅನು), (2025), ಕ್ರಾಂತಿ ಮತ್ತು ಪ್ರತಿಕ್ರಾಂತಿ, ಲಡಾಯಿ ಪ್ರಕಾಶನ, ಗದಗ.
4. ಚಂದ್ರಪ್ಪ ಸಿ., (2023), ಅಶೋಕ: ಸತ್ಯ ಅಹಿಂಸೆಯ ಮಹಾಶಯ, ಸಪ್ನ ಬುಕ್ ಹೌಸ್, ಬೆಂಗಳೂರು.
5. ಮಂಜಪ್ಪ ಶೆಟ್ಟಿ, (1991), ಕರ್ನಾಟಕದಲ್ಲಿ ಅಶೋಕನ ಶಾಸನಗಳು, ಮಸೋಲಿ ಪ್ರಕಾಶನ, ಮೈಸೂರು.
6. ರಾಜರತ್ನಂ ಜಿ.ಪಿ., (1935), ಅಶೋಕ ಮೌರ್ಯ, ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು.
7. ರುದ್ರಮೂರ್ತಿ ಶಾಸ್ತ್ರಿ ಸು., (1979), ಧರ್ಮ ಚಕ್ರವರ್ತಿ ಅಶೋಕ, ಐಬಿಹೆಚ್ ಪ್ರಕಾಶನ, ಬೆಂಗಳೂರು.



**Funding:**
This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.